# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.2581/2017/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:14.11.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** (1) ಶ್ರೀ ಸುಂದರೇಶ್ ನಾಯಕ್, ಸಹಾಯಕ ಕಾರ್ಯಪಾಲಕ ಅಭಿಯಂತರು,ಬೆಸ್ಕಾಂ ಉಪವಿಭಾಗ, ದೊಡ್ಡಬಳ್ಳಾಪುರ, ಇವರ ವಿರುದ್ದ ಶ್ರೀ.ಹನುಮಂತರಾಯಪ್ಪ, ದೊಡ್ಡಬಳ್ಳಾಪುರ ತಾಲ್ಲೂಕಿನ ನಿವಾಸಿ, ಇವರು ಸಲ್ಲಿಸಿದ ದೂರಿನ ಮೇಲೆ ಕ್ರಮಕೈಗೊಳ್ಳುವ ಬಗ್ಗೆ.

*******

ಶ್ರೀ. ಹನುಮಂತರಾಯಪ್ಪ, ದೊಡ್ಡಬಳ್ಳಾಪುರ ತಾಲ್ಲೂಕಿನ ನಿವಾಸಿ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಸುಂದರೇಶ್ ನಾಯಕ್, ಸಹಾಯಕ ಕಾರ್ಯಪಾಲಕ ಅಭಿಯಂತರು,ಬೆಸ್ಕಾಂ ಉಪವಿಭಾಗ, ದೊಡ್ಡಬಳ್ಳಾಪುರ, (ಇನ್ನು ಮುಂದೆ "ಎದುರುದಾರರು " ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕು ಹಾದ್ರಿಪುರ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಕೋಮರ್ಲ ಹ್ಯಾಚರೀಸ್(ಕೋಳಿ ಫಾರಂ)ನ್ನು ಸ್ಥಳಾಂತರಿಸುವ ಬಗ್ಗೆ ರಿಟ್ ಅರ್ಜಿ ಸಂ.46267/2014ರ ಪ್ರಕರಣ ಮುಕ್ತಾಯಗೊಂಡಿದ್ದರೂ ಸಹ ಎದುರುದಾರರು ಪ್ರಕರಣ ಚಾಲ್ತಿಯಲ್ಲಿರುವುದರಿಂದ ಕ್ರಮಕೈಗೊಳ್ಳಲು ಸಾಧ್ಯವಿಲ್ಲವೆಂದು ವಿಧ್ಯುತ್ ಸಂಪರ್ಕವನ್ನು ಕಡಿತಗೊಳಿಸದೆ ಹಣದ ಆಸೆಗಾಗಿ ಕೋಳಿ ಫಾರಂ ಮಾಲೀಕರೊಂದಿಗೆ ಷಾಮೀಲಾಗಿರುತ್ತಾರೆ. ಗ್ರಾಮ ಪಂಚಾಯತಿಯಿಂದ ಈ ಕೋಳಿ

ಫಾರಂಗೆ ನೀಡಿರುವ ಲೈಸೆನ್ಸ್ ರದ್ದುಗೊಳಿಸಿದರೂ ಎದುರುದಾರರು ವಿದ್ಯುತ್ ಸಂಪರ್ಕ ಕಡಿತಗೊಳಿಸಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದೂರು ಸಲ್ಲಿಸಿದ್ದಾರೆ.

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದಿ.21.10.2016ರಂದು ಕೋಮರ್ಲ ಹ್ಯಾಚರೀಸ್ ಅವರಿಗೆ ನೋಟೀಸು ಜಾರಿ ಮಾಡಿದ್ದು, ಉಪಲೋಕಾಯುಕ್ತರು ಮೌಖಿಕವಾಗಿ ಕೋಳಿ ಫಾರಂನ್ನು ತೆರವುಗೊಳಿಸಬೇಕೆಂದು, ವಿದ್ಯುತ್ ಸಂಪರ್ಕ ಕಡಿತಗೊಳಿಸಬೇಕೆಂದು ತಿಳಿಸಿರುತ್ತಾರೆ. ಆದ್ದರಿಂದ ಈ ಬಗ್ಗೆ ತಕರಾರುಗಳಿದ್ದರೆ 7 ದಿನದಲ್ಲಿ ಉತ್ತರಿಸುವಂತೆ ನೋಟೀಸು ನೀಡಲಾಗಿದೆ. ಆಗ ಕಮಲ್ ಹ್ಯಾಚರೀಸ್ ಅವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ.46267/2014 ಅಂತ ಪ್ರಕರಣ ದಾಖಲಿಸಿದ್ದು, ಅದರಲ್ಲಿ ಅಂತಿಮ ಆದೇಶವಾಗುವವರೆಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಬಾರದೆಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ. ಅಲ್ಲದೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾದ್ರಿಪುರ ಗ್ರಾಮಪಂಚಾಯತಿ, ಅವರು ಕೋಮರ್ಲಹ್ಯಾಚರೀಸ್ ಅವರಿಗೆ ನೀಡಿದ ಲೈಸೆನ್ಸ್ ರದ್ದುಗೊಳಿಸಿದ ಬಗ್ಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ದಿ.12.12.2016ರಂದು ಮುಖ್ಯ ಇಂಜಿನಿಯರ್(ವಿ)ಬೆಸ್ಕಾಂ, ಬೆಂಗಳೂರು ಗ್ರಾಮಾಂತರ ವಲಯ ಅವರಿಗೆ ಪತ್ರ ಬರೆದು ಅವರಿಂದ ವಿದ್ಯುತ್ ನಿಲುಗಡೆಗೆ ಯಾವುದೇ ಆದೇಶ ನೀಡಿರುವುದಿಲ್ಲ. ಈ ಬಗ್ಗೆ ಕಾನೂನು ಸಲಹಾ ಅಧಿಕಾರಿಗಳು ಬೆಸ್ಕಾಂ, ನಿಗಮ ಕಾರ್ಯಾಲಯ, ಬೆಂಗಳೂರು, ಇವರಿಂದ ಸಲಹೆ ಪಡೆದಿದ್ದು, ಅವರು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ನೀಡಿದ ನಿರ್ದೇಶನದ ಪ್ರಕಾರ ಕ್ರಮಕೈಗೊಳ್ಳುವಂತೆ ತಿಳಿಸಿರುತ್ತಾರೆ. ಆದರೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಯಾವುದೇ ನಿರ್ದೇಶನ ನೀಡಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರ ಸಲ್ಲಿಸಿರುವುದಿಲ್ಲ.

5. ದೂರುದಾರರು ಹಾಜರುಪಡಿಸಿದ ದೂರು, ಆಕ್ಷೇಪಣೆ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ಹಾದ್ರಿಪುರ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಕೋಮರ್ಲ್‌ಹ್ಯಾಚರೀಸ್ ಕೋಳಿ ಫಾರಂನ್ನು ಹಾಕಿದ್ದು, ಆದರೆ ಅದರಲ್ಲಿ ಸ್ವಚ್ಛತೆ ಕಾಪಾಡದ ಕಾರಣ ಆ ಬಗ್ಗೆ ದೂರು ಸಲ್ಲಿಸಿದಾಗ ಕೋಳಿ ಫಾರಂನ ಲೈಸೆನ್ಸ್ ನ್ನು ಹಾದ್ರಿಪುರ ಗ್ರಾಮಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ರದ್ದುಗೊಳಿಸಿರುತ್ತಾರೆ. ಆದರೆ ಎದುರುದಾರರು ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸದೆ ಕೋಳಿ ಫಾರಂ ಮಾಲೀಕರೊಂದಿಗೆ ಷಾಮೀಲಾಗಿರುತ್ತಾರೆಂದು ಆಪಾದಿಸಲಾಗಿರುತ್ತದೆ.

6. ಎದುರುದಾರರು ಸಲ್ಲಿಸಿರುವ ಆಕ್ಷೇಪಣೆ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ ಕೋಮರ್ಲ್ ಹ್ಯಾಚರೀಸ್ ಕೋಳಿ ಫಾರಂ ಸ್ಥಾಪಿಸಿರುವುದರಿಂದ ಅದರಿಂದ ಉಂಟಾಗುವ ಪರಿಸರ ಮಾಲಿನ್ಯವು ಜನರಿಗೆ ರೋಗ ರುಜಿನಗಳನ್ನು ಹರಡುತ್ತಿರುವುದರಿಂದ ಅದನ್ನು ಸ್ಥಗಿತಗೊಳಿಸಲು ಗ್ರಾಮಪಂಚಾಯತಿ ಹಾದ್ರಿಪುರದ ಸಾಮಾನ್ಯ ಸಭೆಯಲ್ಲಿ ಅಂಗೀಕಾರ ಮಾಡಿರುತ್ತಾರೆ. ಆಗ ಕೋಮರ್ಲ್ ಹ್ಯಾಚರೀಸ್ ಅವರು ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ.46267/2014 ಅಂತ ಪ್ರಕರಣ ದಾಖಲಿಸಿದ್ದು, ಅದರಲ್ಲಿ ಕೋಮರ್ಲ್ ಹ್ಯಾಚರೀಸ್ ಅವರಿಂದ ಸಲ್ಲಿಸುವ ತಕರಾರನ್ನು ಪರಿಗಣಿಸಿ ಗ್ರಾಮಪಂಚಾಯತಿಯು ಕೋಳಿ ಫಾರಂನ್ನು ತೆರವುಗೊಳಿಸುವ ಬಗ್ಗೆ ಕಾನೂನುಪ್ರಕಾರ ಕ್ರಮಕೈಗೊಳ್ಳಬಹುದೆಂದು ಉಚ್ಚ ನ್ಯಾಯಾಲಯವು ಆದೇಶ ನೀಡಿರುತ್ತದೆ.

7. ಆಗ ಗ್ರಾಮ ಪಂಚಾಯತಿಯು ಕೋಮರ್ಲ್ ಹ್ಯಾಚರೀಸ್ ಅವರ ತಕರಾರನ್ನು ಪಡೆದು ಅದನ್ನು ಪರಿಶೀಲಿಸಿ ಕೋಮರ್ಲ್ ಹ್ಯಾಚರೀಸ್ ಕೋಳಿ ಫಾರಂನಿಂದ ಜನರಿಗೆ ಹಾಗೂ ಪರಿಸರಕ್ಕೆ ಹಾನಿ ಉಂಟಾಗುವುದರಿಂದ ಅದನ್ನು ತೆರವುಗೊಳಿಸುವಂತೆ 8.9.2014ರ ಗ್ರಾಮ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಲಾಗಿದೆ. ಈ ಬಗ್ಗೆ ದಾಖಲೆ ಲಭ್ಯವಿರುತ್ತದೆ. ಗ್ರಾಮ ಪಂಚಾಯತಿಯಿಂದ ಠರಾವು ಅಂಗೀಕಾರವಾದ ನಂತರ ಕೋಳಿ ಫಾರಂನ ಲೈಸೆನ್ಸ್ ನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ರದ್ದುಗೊಳಿಸಿರುತ್ತಾರೆ. ಆದರೆ

>>3

ಅದಕ್ಕೆ ನೀಡಿರುವ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸದ ಕಾರಣ ಎದುರುದಾರರ ವಿರುದ್ಧ ಕ್ರಮಕೈಗೊಳ್ಳುವಂತೆ ಈ ದೂರು ದಾಖಲಾಗಿರುತ್ತದೆ.

8. ಎದುರುದಾರರ ಆಕ್ಷೇಪಣೆಯ ಅಂಶಗಳನ್ನು ಪರಿಶಿಲಿಸಿದಾಗ ಇವರು ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯಿಂದ ತಮಗೆ ಯಾವುದೇ ನಿರ್ದೇಶನ ಬರದ ಕಾರಣ ವಿದ್ಯುತ್ ಸಂಪರ್ಕ ಕಡಿತಗೊಳಿಸಿಲ್ಲವೆಂದು ತಿಳಿಸಿರುತ್ತಾರೆ. ಆದರೆ ಎದುರುದಾರರು ಗ್ರಾಮ ಪಂಚಾಯತಿಯ ಅಧೀನ ಅಧಿಕಾರಿಯಾಗಿರುವುದಿಲ್ಲ ಅಲ್ಲದೆ ಈ ಬಗ್ಗೆ ದೂರು ದಾಖಲಾದಾಗ ಹಾಗೂ ಕೋಳಿ ಫಾರಂನ ಲೈಸೆನ್ಸ್ ರದ್ದುಗೊಳಿಸಲಾಗಿದೆಯೆಂದು ತಿಳಿದಾಗ ಎದುರುದಾರರು ಕಾನೂನುಪ್ರಕಾರ ವಿದ್ಯುತ್ ಸಂಪರ್ಕ ಕಡಿತಗೊಳಿಸುವ ಬಗ್ಗೆ ಕ್ರಮಕೈಗೊಳ್ಳಬೇಕಾಗುತ್ತದೆ.

9. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಉಪಲೋಕಾಯುಕ್ತರ ಮೌಖಿಕ ಆದೇಶದ ಮೇರೆಗೆ ಕೋಮರ್ಲ ಹ್ಯಾಚರೀಸ್ ಫಾರಂನ ಲೈಸೆನ್ಸ್‌ನ್ನು ಪಿಡಿಒ ಅವರು ರದ್ದುಗೊಳಿಸಿರುತ್ತಾರೆಂದು ಉಲ್ಲೇಖಿಸಿದ್ದು, ಈ ಕಛೇರಿಯಿಂದ ಆ ರೀತಿ ಯಾವುದೇ ಮೌಖಿಕ ಆದೇಶ ನೀಡಿರುವುದಿಲ್ಲ. ದೂರುದಾರರು ದೂರು ಸಲ್ಲಿಸಿದಾಗ ಆ ಬಗ್ಗೆ ಎದುರುದಾರರಿಂದ ಆಕ್ಷೇಪಣೆ ಕೋರಿದ್ದು, ಅವರು ಅದನ್ನು ಪರಿಶೀಲಿಸಿ ಲೈಸೆನ್ಸ್‌ನ್ನು ರದ್ದುಗೊಳಿಸಿರುತ್ತಾರೆ. ಆದರೆ ಎದುರುದಾರರು ತಮ್ಮ ಕರ್ತವ್ಯವನ್ನು ಸಮರ್ಪಕವಾಗಿ ನಿಭಾಯಿಸುವುದನ್ನು ಬಿಟ್ಟು, ಬೇರೆಯವರು ತಮಗೆ ಮಾಹಿತಿ ನೀಡಿರುವುದಿಲ್ಲ, ನಿರ್ದೇಶನ ನೀಡಿರುವುದಿಲ್ಲ, ದಾಖಲೆ ನೀಡಿರುವುದಿಲ್ಲ, ಮೇಲಾಧಿಕಾರಿಗಳು ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಆದೇಶ ನೀಡಿರುವುದಿಲ್ಲ, ಇತ್ಯಾದಿ ಕಾರಣಗಳನ್ನು ನೀಡಿರುತ್ತಾರೆ. ಆದ್ದರಿಂದ ಎದುರುದಾರರು ಸಾರ್ವಜನಿಕರ ದೂರುಗಳಿಗೆ ಸ್ಪಂದಿಸದೇ ಕೇವಲ ಬೇರೊಬ್ಬರು ತಮಗೆ ಯಾವುದೇ ಮಾಹಿತಿ ನೀಡಿಲ್ಲವೆಂಬ ಕಾರಣದಿಂದ ತಮ್ಮ ಕರ್ತವ್ಯವನ್ನು ಸಮರ್ಪಕವಾಗಿ ನಿಭಾಯಿಸುವಲ್ಲಿ ವಿಫಲರಾಗಿದ್ದೂ ಅಲ್ಲದೆ ಕೋಳಿ ಫಾರಂಗೆ ಇರುವ

ಲೈಸೆನ್ಸ್ ರದ್ದುಗೊಳಿಸಿದರೂ ಸಹ ಅದಕ್ಕೆ ವಿದ್ಯುತ್ ಸಂಪರ್ಕ ಕಡಿತಗೊಳಿಸುವ ಬಗ್ಗೆ ಸೂಕ್ತ ಕ್ರಮಕೈಗೊಳ್ಳದೇ ಕರ್ತವ್ಯದಲ್ಲಿ ನಿರ್ಲಕ್ಷ್ಯವಹಿಸಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

10. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ದೊಡ್ಡಬಳ್ಳಾಪುರ ತಾಲ್ಲೂಕು ಹಾದ್ರಿಪುರ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಕೋಮರ್ಲ ಹ್ಯಾಚರೀಸ್(ಕೋಳಿ ಫಾರಂ)ಗೆ ನೀಡಿದ ವಿಧ್ಯುತ್ ಸಂಪರ್ಕವನ್ನು ಕಡಿತಗೊಳಿಸಲು ಕಾನೂನು ಪ್ರಕಾರ ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶಿಸಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

11. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

Sd/- 14/11/17

(ನ್ಯಾಯಮೂರ್ತಿ ಸುಭಾಷ್ ಬಿ.ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.